## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ ಹಾಗೂ ಶ್ರೀ ಸುಭಾಷ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/553/ಗ್ರಾಪಂಕಾ/2017, ದಿನಾಂಕ: 12/07/2017 & 05/12/2017.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ: UPLOK-2/DE/960/2017/ARE-09, ದಿನಾಂಕ: 22-10-2019.
3. ಸರ್ಕಾರದ ಸಮ ಸಂಖ್ಯೆಯ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:25/10/2019.
4. ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಜಿಲ್ಲೆ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 28/11/2019.
5. ಶ್ರೀ ಸುಭಾಷ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 06/12/2019.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ:12/07/2017ರ ಸರ್ಕಾರದ ಆದೇಶದಲ್ಲಿ, ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 11ರಂತೆ ಇಲಾಖಾ ವಿಚಾರಣೆ ನಡೆಸಲು ಹಾಗೂ ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ದಿನಾಂಕ:05/12/2017ರ ಸರ್ಕಾರದ ತಿದ್ದುಪಡಿ ಆದೇಶದಲ್ಲಿ, ಶ್ರೀ ಸುಭಾಷ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i)ರಡಿ ಇಲಾಖಾ ವಿಚಾರಣೆ ನಡೆಸಲು ಮಂಜೂರಾತಿ ನೀಡಿ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಂತೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿತ್ತು. ಅದರಂತೆ, ವಿಚಾರಣಾಧಿಕಾರಿಗಳು (ಅಪರ ನಿಬಂಧಕರು, ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ) ಕೆಳಕಂಡ ಆಪಾದನೆಗಳ ಕುರಿತು ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**ದೋಷಾರೋಪಣೆ:-**

**"ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಗಾದಿಗನೂರು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯನಿರ್ವಸುತ್ತಿದ್ದ ಅವಧಿಯಲ್ಲಿ ಗಾದಿಗನೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಭುವನಹಳ್ಳಿ ಗ್ರಾಮದಲ್ಲಿ ರಾಜೀವ್ ಗಾಂಧಿ ಆವಾಸ ಯೋಜನೆ ಮತ್ತು ಆಶ್ರಯ ಯೋಜನೆಯಲ್ಲಿ ಹಲವಾರು ಅಕ್ರಮಗಳನ್ನು ಮಾಡಿ, ಮನೆಗಳ ನಿರ್ಮಾಣ ಮಾರ್ಗಸೂಚಿ, ನೀತಿ/ನಿಯಮಗಳನ್ನು ಉಲ್ಲಂಘನೆ ಮಾಡಿ ಕರ್ತವ್ಯ ಲೋಪವೆಸಗಿದ್ದಾರೆ ಎನ್ನಲಾದ ಆರೋಪಗಳ ಬಗ್ಗೆ"**

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ವಿಚಾರಣಾಧಿಕಾರಿಯವರ ವರದಿಯಲ್ಲಿ, ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ ಹಾಗೂ ಶ್ರೀ ಸುಭಾಷ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರುಗಳ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ಸದರಿಯವರುಗಳ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ ಎಸಗಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಈ ಆಪಾದಿತ ನೌಕರರುಗಳ ಮೇಲಿನ ಆಪಾದನೆಗಳ ಕುರಿತು ಮಾನ್ಯ ಲೋಕಾಯುಕ್ತರು ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ.

......2

**"i) It is hereby recommended to the Government to impose penalty of 'withholding 4 annual increments payable to DGO-1 Shri Channaiah M., and also to defer his promotion for 4 years whenever he becomes eligible for promotion'.**

**ii) It is hereby recommended to the Government to impose penalty of 'recovering a sum of Rs.1,30,000/- from the pension payable to DGO-3 Sri.Subhash Meti, Panchayath Development Officer'.**

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ, ಆರೋಪಿತ ನೌಕರರುಗಳಿಗೆ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) & (5)ರಲ್ಲಿ, ದಿನಾಂಕ: 25/10/2019ರ ನೋಟೀಸಿಗೆ ಆಪಾದಿತ ನೌಕರರುಗಳು ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ.

ಆಪಾದಿತ ನೌಕರರಾದ ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳು ಕೆಳಕಂಡಂತಿದೆ:-

- ಹೊಸಪೇಟೆ ತಾಲ್ಲೂಕಿನ ಗಾದಿಗನೂರು ಗ್ರಾಮ ಪಂಚಾಯಿತಿಯ ವಸತಿ ಯೋಜನೆಯ ಇಂದಿರಾ ಅವಾಜ್ ಯೋಜನೆಯಾಗಲೀ, ಬಸವ ವಸತಿ ಯೋಜನೆಯಾಗಲೀ, ಮನೆಗಳ ಫಲಾನುಭವಿಗಳ ಆಯ್ಕೆಗೆ ಸಂಬಂಧಿಸಿದಂತೆ 2008-09ನೇ ಸಾಲಿನಿಂದ 2011-12ನೇ ಸಾಲಿನವರೆಗೆ ಮನೆಗಳ ಆಯ್ಕೆ ಪ್ರಕ್ರಿಯೆ ತಮ್ಮ ಅಧಿಕಾರ ಅವಧಿಯಲ್ಲಿ ಆಯ್ಕೆಯಾಗಿರುವುದಿಲ್ಲ ಹಾಗೂ ತಾವು ದಿನಾಂಕ:25.07.2012 ರಂದು ಗಾದಿಗನೂರು ಗ್ರಾಮ ಪಂಚಾಯಿತಿಯ ಪ್ರಭಾರ ಅಭಿವೃದ್ಧಿ ಅಧಿಕಾರಿಯಾಗಿ ಚಾರ್ಜ್ ವಹಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ.
- ಸದರಿ ಇಂದಿರಾ ಆವಾಜ್ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳು ಮನೆ ಕಟ್ಟಿಕೊಂಡಿದ್ದು ನಿಜವಿರುತ್ತದೆ. ಸ್ವತಃ ಫಲಾನುಭವಿಗಳ ಮನೆಗಳಿಗೆ ಹೋಗಿ ಜಿ.ಪಿ.ಎಸ್. ಮಾಡಿ ಹಂತ-ಹಂತವಾಗಿ ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಸಂದಾಯ ಮಾಡಲಾಗಿರುತ್ತದೆ. ಇದರಲ್ಲಿ ಯಾವುದೇ ತರಹದ ಕರ್ತವ್ಯ ಲೋಪವಾಗಲೀ ಅಥವಾ ನಿಯಮ ಉಲ್ಲಂಘನೆಯಾಗಿರಲೀ ಆಗಿರುವುದಿಲ್ಲ. ಪ್ರತಿಯೊಂದು ಫಲಾನುಭವಿಗಳ ಕಡತಗಳನ್ನು ನಿರ್ವಹಿಸಿದ್ದು, ಎಲ್ಲಾ ಕಡತಗಳು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.
- ಸದರಿ ಬಸವ ವಸತಿ ಯೋಜನೆಗೆ ಸಂಬಂಧಿಸಿದಂತೆ, ತಾಲ್ಲೂಕು ಪಂಚಾಯಿತಿಯ ನೋಡಲ್ ಅಧಿಕಾರಿಗಳು ಪ್ರತಿ ಫಲಾನುಭವಿಗಳ ಮನೆಗಳಿಗೆ ತೆರಳಿ ಜಿ.ಪಿ.ಎಸ್. ಮಾಡಿರುತ್ತಾರೆ. ಸದರಿ ಜಿ.ಪಿ.ಎಸ್. ಪ್ರಕಾರ ರಾಜೀವ್ ಗಾಂಧಿ ವಸತಿ ನಿಗಮದಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಿರುತ್ತದೆ.
- ಮಾನ್ಯ ಉಪ ನಿಬಂಧಕರು ವಿಚಾರಣೆಗಳು-05, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ದಿನಾಂಕ:18.06.2014ರಂದು ಸದರಿ ದೂರಿಗೆ ಸಂಬಂಧಿಸಿದಂತೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು ತಿಳಿಸಿರುತ್ತಾರೆ.

ಆಪಾದಿತ ನೌಕರರಾದ ಶ್ರೀ ಸುಭಾಷ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ), ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳು ಕೆಳಕಂಡಂತಿದೆ:-

- ಸದರಿ ಪ್ರಕರಣದಲ್ಲಿ 3ನೇ ಆಪಾದಿತ ನೌಕರನಾದ ತಾವು ದಿನಾಂಕ:20.11.2010 ರಿಂದ 31.03.2012 ರವರೆಗೆ ಗಾದಿಗನೂರು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

- ವಿಚಾರಣಾಧಿಕಾರಿಗಳ ಪರವಾಗಿ ಮಂಡನಾಧಿಕಾರಿಯವರು ಕೆ. ಈರಿಸ್ವಾಮಿ ಇವರನ್ನು ಪಿಡಬ್ಲೂ-1 ಆಗಿ ಮತ್ತು ಶ್ರೀ. ಬಿ. ಮಂಜುನಾಥ ಇವರನ್ನು ಪಿಡಬ್ಲೂ-2 ಆಗಿ ಗುರುತಿಸಿಕೊಂಡು ಮುಖ್ಯ ಪರೀಕ್ಷೆಗೆ ಒಳಪಡಿಸಿರುತ್ತಾರೆ.

- ಪಿಡಬ್ಲ್ಯೂ-1 ಇವರು ತಮ್ಮ ಮುಖ್ಯ ಪರೀಕ್ಷೆಯಲ್ಲಿ 2008-09 ರಿಂದ 2012-13ರವರೆಗೆ ಆಶ್ರಯ ಯೋಜನೆಯಡಿಯಲ್ಲಿ ವಸತಿ ಮನೆಗಳ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇರುವ ಮಾರ್ಗದರ್ಶಿಗಳನ್ನು ಉಲ್ಲಂಘನೆ ಮಾಡಿ, ಅಧಿಕಾರ ದುರುಪಯೋಗ ಮತ್ತು ಅರ್ಹ ಫಲಾನುಭವಿಗಳಿಗೆ ಸದರಿ ಯೋಜನೆಯಲ್ಲಿ ಅವಕಾಶ ನೀಡದೇ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಅಧಿಕಾರ ದುರುಪಯೋಗಪಡಿಸಿಕೊಂಡಿರುತ್ತಾರೆಂದು ನುಡಿದು, ಸಂಬಂಧಪಟ್ಟ ದಾಖಲಾತಿಗಳನ್ನು ನಿಶಾನೆ-ಪಿ ಎಂದು ಗುರುತಿಸಿಕೊಂಡಿರುತ್ತಾರೆ.

- ಸದರಿಯವರನ್ನು ತಾವು ಖುದ್ದು ಪಾಟೀ ಸವಾಲಿಗೆ ಒಳಪಡಿಸಿದ್ದು, ತಮ್ಮ ಅವಧಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದರೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಮನೆಗಳ ಕಟ್ಟಡ ನಿರ್ಮಾಣದ ಮಾರ್ಗಸೂಚಿ ನನ್ನ ಬಳಿ ಇಲ್ಲವೆಂದು ಪಿಡಬ್ಲ್ಯೂ-1 ರವರು ನುಡಿದಿರುತ್ತಾರೆ. ಇಂದಿರಾ ಆವಾಜ್ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುರುವುದು ಗ್ರಾಮಸಭೆ ಮತ್ತು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ಎಂದರೆ ಸರಿ ಎಂದು ಒಪ್ಪಿಕೊಂಡಿರುತ್ತಾರೆ. ಫಲಾನುಭವಿಯನ್ನಾಗಿ ಆಯ್ಕೆ ಮಾಡುವ ಅಧಿಕಾರ ಪಿಡಿಓರವರಿಗೆ ಇರುವುದಿಲ್ಲವೆಂಬುದನ್ನು ಸಹ ಒಪ್ಪಿಕೊಂಡಿರುತ್ತಾರೆ. ಶ್ರೀಮತಿ ವಿಜಯಕುಮಾರಿ ಕೋಂ ಈಶ್ವರ ಇವರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡಿದಾಗ ತಾವು ಪಿಡಿಓ ಆಗಿರಲಿಲ್ಲವೆಂಬುದನ್ನು ಸಹ ಒಪ್ಪಿಕೊಂಡಿರುತ್ತಾರೆ. ತಮ್ಮನಾಳಪ್ಪ ದೇವಸ್ಥಾನದ ಪಕ್ಕದಲ್ಲಿ ಕೆ.ಈಶ್ವರ ಇವರು ಅಕ್ರಮ ಕಟ್ಟಡ ನಿರ್ಮಾಣ ಮಾಡಿದ್ದು, ಸದರಿ ನಿವೇಶನ ಕಾನೂನು ಬಾಹಿರವಾಗಿದೆ ಎಂದು ಹೇಳಿದ್ದು, ಆ ವೇಳೆಯಲ್ಲಿ ತಾವು ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲವೆಂಬುದನ್ನು ಪಿಡಬ್ಲ್ಯೂ-1 ರವರು ಒಪ್ಪಿಕೊಂಡಿರುತ್ತಾರೆ. ತಮ್ಮ ಅವಧಿಯಲ್ಲಿ ಕಟ್ಟಡ ನಿರ್ಮಾಣದ ಬಗ್ಗೆ ಲೈಸೆನ್ಸ್ ನೀಡಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲವೆಂದು ಪಿಡಬ್ಲ್ಯೂ-1 ರವರು ಒಪ್ಪಿಕೊಂಡಿರುತ್ತಾರೆ. ದಿನಾಂಕ:17.11.2013 ರಂದು ತಮ್ಮನಾಳಪ್ಪ ದೇವಸ್ಥಾನದ ಪಕ್ಕ ಕಟ್ಟುತ್ತಿರುವ ಕಟ್ಟಡವನ್ನು ನಿಲ್ಲಿಸಲು ಗ್ರಾಮ ಪಂಚಾಯಿತಿ ಪತ್ರ ಕೊಟ್ಟಿದ್ದೇನೆ ಎಂಬುದನ್ನು ಪಿಡಬ್ಲ್ಯೂ-1 ಹೇಳಿ ಸದರಿ ಅವಧಿಯಲ್ಲಿ ತಾವು ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂಬುದನ್ನು ಸಹ ಒಪ್ಪಿಕೊಂಡಿರುತ್ತಾರೆ. ಪಿಡಬ್ಲ್ಯೂ-1 ರವರು ಕೊಟ್ಟ ದೂರಿನಲ್ಲಿ ತಮ್ಮ ಹೆಸರಿಲ್ಲವೆಂದು ಒಪ್ಪಿಕೊಂಡಿರುತ್ತಾರೆ.

- ಪಿಡಬ್ಲ್ಯೂ-2 ಆದ ಬಿ.ಮಂಜುನಾಥ ಇವರು ಮುಖ್ಯ ಪರೀಕ್ಷೆಯಲ್ಲಿ ಹೊಸಪೇಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಗಾದಿಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭುವನಹಳ್ಳಿ ಗ್ರಾಮದ ವಸತಿ ಮನೆಗಳ ಕಟ್ಟಡ ನಿರ್ಮಾಣದಲ್ಲಿ ಮನೆಗಳ ನಿರ್ಮಾಣದ ಮಾರ್ಗದರ್ಶಿ, ನೀತಿ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ತಮಗೂ ಮತ್ತು ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರಾದ ಸುಹಾಸ್ ಬಿ ಜಾಧವ್ ಇವರಿಗೆ ಆದೇಶಿಸಿದ ಮೇರೆಗೆ ಗಾದಿಗನೂರು ಗ್ರಾಮ ಪಂಚಾಯಿತಿಗೆ ಹೋಗಿ ದಾಖಲಾತಿಗಳನ್ನು ಪರಿಶೀಲಿಸಿ ವರದಿಯನ್ನು ಕೊಟ್ಟಿರುವುದಾಗಿ ನುಡಿದಿರುತ್ತಾರೆ.

- ಸದರಿಯವರನ್ನು ತಾವು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಸದರಿ ವರದಿಯಲ್ಲಿ ಸದರಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರಿಂದ ಸೂಕ್ತ ವಿವರಣೆ ಪಡೆಯಬಹುದು ಎಂದು ತಿಳಿಸಿದ್ದೇವೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ತಮ್ಮ ಅವಧಿಯಲ್ಲಿ ಲೋಪದೋಷಗಳು ಆಗಿರುವ ಬಗ್ಗೆ ವರದಿಯಲ್ಲಿ ತಿಳಿಸಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಫಲಾನುಭವಿಗಳ ಆಯ್ಕೆ ಸಂಬಂಧ ಗ್ರಾಮ ಸಭೆ ನಡೆಸುವುದು ಕಾರ್ಯದರ್ಶಿಯವರ ಕರ್ತವ್ಯವೆಂದು ಒಪ್ಪಿಕೊಂಡಿರುತ್ತಾರೆ. ಆ ಬಗ್ಗೆ ನಡವಳಿಯನ್ನು ಬರೆಯುವುದು ಸಹ ಕಾರ್ಯದರ್ಶಿಯವರ ಕರ್ತವ್ಯವೆಂದು ಒಪ್ಪಿಕೊಂಡಿರುತ್ತಾರೆ. ಪಿಡಬ್ಲ್ಯೂ-1 ಆದ ದೂರುದಾರರು ತಮ್ಮ ವಿರುದ್ಧ ಯಾವುದೇ ಆಪಾದನೆ ಮಾಡಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಸದರಿ ವರದಿಯಲ್ಲಿ ಯಾರ ವಿರುದ್ಧವೂ ಸಹ ಆಪಾದನೆ ಸಾಬೀತಾಗಿದೆ ಎಂದು ಹೇಳಿಲ್ಲವೆಂದು ನುಡಿದಿರುತ್ತಾರೆ.

- ಮುಂದುವರೆದು, ದಿನಾಂಕ:20.02.2019ರಂದು ವಿಚಾರಣಾಧಿಕಾರಿಗಳು ಪ್ರಶ್ನಾವಳಿಗಳನ್ನು ಕೇಳಿದ್ದು, ಪ್ರಶ್ನೆ-1 ರಲ್ಲಿ ಆಪಾದಿತ ಸರ್ಕಾರಿ ನೌಕರರಾದ ಚನ್ನಯ್ಯ ಇವರಿಗೆ ಸಂಬಂಧಿಸಿರುವುದರಿಂದ ಸದರಿ ಪ್ರಶ್ನೆಯು ನನಗೆ ಅನ್ವಯಿಸದ ಕಾರಣ ಸುಳ್ಳು ಎಂದು ಉತ್ತರವನ್ನು ನೀಡಿರುತ್ತೇನೆ. ಪ್ರಶ್ನೆ-2 ರಲ್ಲಿನ ಮಾಹಿತಿಗಳು ಕಾರ್ಯದರ್ಶಿಯವರಿಗೆ ಸಂಬಂಧಪಟ್ಟಿರುವುದರಿಂದ ತಾವು ಸುಳ್ಳು ಎಂದು ಉತ್ತರಿಸಿರುತ್ತೇನೆ. ಪ್ರಶ್ನೆ-4 ರಲ್ಲಿ ಮಾಹಿತಿಗಳು ಪಂಚಾಯಿತಿ ಕಾರ್ಯದರ್ಶಿಯವರಿಗೆ ಅನ್ವಯಿಸುವುದರಿಂದ ಹಾಗೂ ಸದರಿ ಅವಧಿಯಲ್ಲಿ ತಾವು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಸದರಿ ಪ್ರಶ್ನೆಯು ತಮಗೆ ಅನ್ವಯವಾಗುವುದಿಲ್ಲ. ಪ್ರಶ್ನೆ-5 ರಲ್ಲಿನ ಮಾಹಿತಿಗಳು ಪಂಚಾಯಿತಿ ಕಾರ್ಯದರ್ಶಿಯವರಿಗೆ ಅನ್ವಯಿಸುವುದರಿಂದ ಹಾಗೂ ಸದರಿ ಅವಧಿಯಲ್ಲಿ ತಾನು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಸದರಿ ಪ್ರಶ್ನೆಯು ತಮಗೆ ಅನ್ವಯವಾಗುವುದಿಲ್ಲ. ಪ್ರಶ್ನೆ-5 ರಲ್ಲಿನ ಮಾಹಿತಿಗಳು ಪಂಚಾಯಿತಿ ಕಾರ್ಯದರ್ಶಿಯವರಿಗೆ ಅನ್ವಯಿಸುವುದರಿಂದ ಹಾಗೂ ಸದರಿ ಅವಧಿಯಲ್ಲಿ ತಾವು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಸದರಿ ಪ್ರಶ್ನೆಯು ತಮಗೆ ಅನ್ವಯವಾಗುವುದಿಲ್ಲ. ಪ್ರಶ್ನೆ-6,7 ಮತ್ತು 8 ರ ಪ್ರಶ್ನೆಗೆ ಸಂಬಂಧಿಸಿದಂತೆ, ಮಾಹಿತಿಗಳು ಪಂಚಾಯಿತಿ ಕಾರ್ಯದರ್ಶಿಯವರಿಗೆ ಅನ್ವಯಿಸುವುದರಿಂದ ಹಾಗೂ ಸದರಿ ಅವಧಿಯಲ್ಲಿ ತಾನು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಸದರಿ ಪ್ರಶ್ನೆಯು ನನಗೆ ಅನ್ವಯವಾಗುವುದಿಲ್ಲ. ಪ್ರಶ್ನೆ-9, 10 ಮತ್ತು 11 ರಲ್ಲಿ ನಡೆದಿರುವ ವಿಷಯವನ್ನು ಸರಿ ಎಂದು ಉತ್ತರಿಸಿರುತ್ತೇನೆ. ಪ್ರಶ್ನೆ-12 ರಲ್ಲಿನ ಮಾಹಿತಿಗಳು ಪಂಚಾಯಿತಿ ಕಾರ್ಯದರ್ಶಿಯವರಿಗೆ ಅನ್ವಯಿಸುವುದರಿಂದ ಹಾಗೂ ಸದರಿ ಅವಧಿಯಲ್ಲಿ ತಾವು ಸದರಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಸದರಿ ಪ್ರಶ್ನೆಯು ತಮಗೆ ಅನ್ವಯವಾಗುವುದಿಲ್ಲ.

- ಮೇಲಿನ ಎಲ್ಲಾ ಅಂಶಗಳನ್ನು ಪರಿಗಣೆನೆಗೆ ತೆಗೆದುಕೊಂಡಾಗ, ವಿಚಾರಣಾಧಿಕಾರಿಗಳ ಪರವಾಗಿ ಮಂಡನಾಧಿಕಾರಿಯವರು ಗುರುತಿಸಿಕೊಂಡ ಪಿಡಬ್ಲ್ಯೂ-1 ಮತ್ತು 2 ರವರ ಮುಖ್ಯ ಪರೀಕ್ಷೆ ಮತ್ತು ಪಾಟೀ ಸವಾಲಿನಲ್ಲಿ ಪಂಚಾಯಿತಿಯ ಕಾರ್ಯದರ್ಶಿಯವರು ತಪ್ಪನ್ನು ಎಸಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಮಂಡನಾಧಿಕಾರಿಯವರು ತಮ್ಮ ವಿರುದ್ಧ ಆಪಾದನೆಗಳನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿರುವ ಕಾರಣ ತಮ್ಮ ವಿರುದ್ಧ ಮಾಡಲಾದ ಆಪಾದನೆಗಳಿಂದ ಮುಕ್ತಾಯಗೊಳಿಸಿ ಕೋರಿರುತ್ತಾರೆ.

- ವಿಚಾರಣಾಧಿಕಾರಿಗಳು ತಾವು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಯನ್ನು ಮಾನ್ಯ ಮಾಡಿರುವುದಿಲ್ಲ ಹಾಗೂ ಪಿಡಬ್ಲ್ಯೂ-1 ಮತ್ತು ಪಿಡಬ್ಲ್ಯೂ-2 ಇವರುಗಳು ತಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯನ್ನು ಸಮರ್ಥಿಸಿಕೊಳ್ಳಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಕಾರ್ಯದರ್ಶಿಯವರೇ ಎಲ್ಲಾ ಆಪಾದನೆಗಳಿಗೆ ಕಾರಣರಾಗಿರುತ್ತಾರೆಂದು ತಿಳಿಸಿದ್ದರೂ ಸಹ ವಿಚಾರಣಾಧಿಕಾರಿಗಳು ತಮ್ಮ ವಿರುದ್ಧ ಮಾಡಲಾಗಿರುವ ಆಪಾದನೆಯು ಸಾಬೀತಾಗಿರುತ್ತದೆ ಎಂದು ವಿಚಾರಣಾ ವರದಿಯನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಒಪ್ಪಬಾರದೆಂದು ಕೋರಿರುತ್ತಾರೆ.

ಸದರಿ ಆಪಾದಿತ ನೌಕರರುಗಳು ಸಲ್ಲಿಸಿರುವ ಲಿಖಿತ ಹೇಳಿಕೆ / ಸಮಜಾಯಿಷಿಗಳನ್ನು ಮತ್ತು ದೂರುದಾರರು ನೀಡಿರುವ ದೂರಿನಲ್ಲಿರುವ ಅಂಶಗಳನ್ನು ಹಾಗೂ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯ ಮೇಲೆ ಮಾನ್ಯ ಉಪ ಲೋಕಾಯುಕ್ತರು ಮಾಡಿರುವ ಶಿಫಾರಸ್ಸನ್ನು ಪರಿಶೀಲಿಸಿದಾಗ, ಕೆಳಕಂಡ ಅಂಶಗಳು ಕಂಡುಬರುತ್ತವೆ.

- ಶ್ರೀಮತಿ ವಿಜಯ ಕುಮಾರಿ ಗಂಡ ಈಶ್ವರಪ್ಪ ಇವರ ನಿವೇಶದ ಕಟ್ಟಡ ಕಾನೂನುಬಾಹಿರವಾಗಿದೆ. ನ್ಯಾಯಾಲಯದಲ್ಲಿ ವಿವಾದದಲ್ಲಿದೆ ಎನ್ನುವ ಅಂಶಕ್ಕೆ ಇಂದಿರಾ ಆವಾಸ್ ಯೋಜನೆಯಲ್ಲಿ ಅನುಮೋದನೆಯಾಗಿ ಅನುದಾನ ಬಿಡುಗಡೆಯಾಗಿದೆ. ಆದರೆ ಆಸ್ತಿ ಸಂಖ್ಯೆಯು ಗ್ರಾಮ ಪಂಚಾಯಿತಿ ಡಿಮ್ಯಾಂಡ್ ಬುಕ್‌ನಲ್ಲಿ ಇರುವುದಿಲ್ಲ. ನ್ಯಾಯಾಲಯದಲ್ಲಿ ವಿವಾದ ಇರುವ ಬಗ್ಗೆ ಯಾವುದೇ ದಾಖಲೆಗಳು ಲಭ್ಯವಿಲ್ಲ.

- ಶ್ರೀಮತಿ ಕೆ. ಪಾರ್ವತಮ್ಮ ಕೋಂ. ಜಂಬಣ್ಣ ಇವರಿಗೆ ರೂ.55,000/-ಗಳು ಬಿಡುಗಡೆಯಾಗಿದೆ. ಕಾರ್ಯದರ್ಶಿಯವರು ಕಡತ ತೋರಿಸಿಲ್ಲ. ಆಸ್ತಿ ಸಂಖ್ಯೆ:2/29ಎ ಆಗಿದೆ ಎಂದು 2 ಕಡತಗಳ ಬಗ್ಗೆ ವರದಿ ನೀಡಿದ್ದು, ಉಳಿದಂತೆ ಯಾವುದೇ ವಿಷಯಗಳು ಸಾಬೀತಾಗಿರುವುದಿಲ್ಲವೆಂದು ತಾಲ್ಲೂಕು ಪಂಚಾಯಿಯ ದ್ವಿತೀಯ ದರ್ಜೆ ಸಹಾಯಕರು, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸಪೇಟೆ ಇವರಿಗೆ ಸಲ್ಲಿಸಿರುವ ವರದಿಯಲ್ಲಿ ಕಂಡುಬರುತ್ತದೆ.

- ಶ್ರೀಮತಿ ಗೀತಾ ಇವರ ಗಂಡ ಗಾದಿಲಿಂಗಪ್ಪ ಮತ್ತು ಇವರ ಅಣ್ಣ-ತಮ್ಮಂದಿರ ನಡುವೆ ಜಾಗದ ಸಮಸ್ಯೆ ಇರುವುದರಿಂದ, ಇನ್ನೂ ನೊಂದಾಣೆ ಮಾಡಿರುವುದಿಲ್ಲ. ರೂ.75,000/- ಹಣ ಬಿಡುಗಡೆಯಾಗಿದೆ ಎಂದು ತಿಳಿಸಿದ್ದು, ಈ ಬಗ್ಗೆ ಆಪಾದಿತ ನೌಕರರಿಂದ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿದೆ ಇರುವುದು ವಿಚಾರಣಾಧಿಕಾರಿಗಳ ವಿಚಾರಣಾ ವರದಿಯಿಂದ ಕಂಡುಬರುತ್ತದೆ.

- ಕಂತಿ ಹಂಪಣ್ಣ ಇವರ ಹೆಸರನ್ನು ಶ್ರೀಮತಿ ಕಂತಿ ಹಂಪಣ್ಣ ತಂದೆ ದೊಡ್ಡ ಧರ್ಮಪ್ಪ ಅಂತ ಬರೆದುಕೊಂಡಿದ್ದು, ಅವರ ಅಣ್ಣ ಮತ್ತು ಅವರ ಹೆಸರು ಒಂದೇ ಆಗಿರುತ್ತದೆ ಎಂದು ವರದಿಯಲ್ಲಿ ನಮೂದಿಸಿರುತ್ತಾರೆ. ಇದರ ಬಗ್ಗೆಯೂ ಸಹ ಆಪಾದಿತ ನೌಕರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿಲ್ಲ, ಫಲಾನುಭವಿಗಳನ್ನು ಗ್ರಾಮ ಪಂಚಾಯಿತಿಯ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ ಎನ್ನುವುದು ನಿಜ. ಆದರೆ ಸರಿಯಾದ ದಾಖಲೆಗಳಲ್ಲಿದ ವ್ಯಕ್ತಿಗಳಿಗೆ ಇಂದಿರಾ ಆವಾಸ್ ಯೋಜನೆಯಲ್ಲಿ ಮನೆ ಮಂಜೂರು ಮಾಡಲು ಅನುಮೋದನೆ ಸಲ್ಲಿಸಿದ್ದು, ದಾಖಲೆಗಳನ್ನು ಕೇಳಿದಾಗ ಅವುಗಳನ್ನು ತೋರಿಸದೇ ಆಪಾದಿತ ನೌಕರರು ಕರ್ತವ್ಯ ಲೋಪವೆಸಗಿರುತ್ತಾರೆ ಎನ್ನಲು ಸಾಕಷ್ಟು ಆಧಾರಗಳಿವೆ ಎಂದು ಇದಲ್ಲದೇ ಗ್ರಾಮ ಪಂಚಾಯಿತಿ ಸದಸ್ಯರಾದ ಈಶ್ವರ ಇವರ ತಾಯಿ ಮತ್ತು ತಂಗಿ ಹೆಸರಿನಲ್ಲಿ ಮನೆಗಳು ಮಂಜೂರು ಆಗಿವೆ ಎನ್ನುವುದನ್ನು ಸಹ ಅಲ್ಲಗಳೆಯದೇ, ಗ್ರಾಮ ಪಂಚಾಯಿತಿ ಸದಸ್ಯರು ಪಂಚಾಯಿತಿಯಿಂದ ಲಾಭ ಪಡೆಯುವ ಹಾಗಿಲ್ಲದೇ ಇದ್ದರೂ ಸಹ ಅವರ ಕುಟುಂಬ ಸದಸ್ಯರಿಗೆ ಮನೆ ಮಂಜೂರು ಮಾಡಿಸಿ, ಕರ್ತವ್ಯ ಲೋಪವೆಸಗಿರುವುದು ವಿಚಾರಣಾಧಿಕಾರಿಗಳು, ಕರ್ನಾಟಕ ಲೋಕಾಯುಕ್ತರವರ ವಿಚಾರಣಾ ವರದಿಯಿಂದ ಸಾಬೀತಾಗಿರುವುದು ಕಂಡುಬರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ದೂರುದಾರರು ಸಲ್ಲಿಸಿರುವ ದೂರಿನಲ್ಲಿನ ಅಂಶಗಳು, ವಿಚಾರಣಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಆಪಾದಿತ ನೌಕರರುಗಳು ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ಸದರಿಯವರುಗಳ ಮೇಲಿನ ಆಪಾದನೆಗಳನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣಗಳು ಕಂಡುಬರುತ್ತಿಲ್ಲವಾದ್ದರಿಂದ ಸದರಿ ಆಪಾದಿತ ನೌಕರರುಗಳ ವಿರುದ್ಧದ ವಿಚಾರಣಾ ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳ ವರದಿ, ತತ್ಸಂಬಂಧಿತ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) & (iiiಎ)ರಡಿ ನಿರ್ದಿಷ್ಟಪಡಿಸಿರುವಂತೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ಹಾಗೂ ಸದರಿಯವರನ್ನು ಬಡ್ತಿಗೆ ಪರಿಗಣಿಸುವ ದಿನಾಂಕದಿಂದ ನಾಲ್ಕು ವರ್ಷಗಳವರೆಗೆ ಅವರ ಬಡ್ತಿಯನ್ನು ತಡೆಯಿಡಿಯುವ ದಂಡನೆಯನ್ನು** ಮತ್ತು

......6

ಶ್ರೀ ಸುಭಾಷ್ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ) ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(1)(ಬಿ)ರಡಿ **"ಸದರಿಯವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ರೂ.1,30,000/-ಗಳನ್ನು ವಸೂಲು ಮಾಡುವ** ದಂಡನೆಯನ್ನು ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/446/ಗ್ರಾಪಂಕಾ/2019,**
**ಬೆಂಗಳೂರು, ದಿನಾಂಕ:10/02/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) & (iiiಎ)ರಡಿ ನಿರ್ದಿಷ್ಟಪಡಿಸಿರುವಂತೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ಹಾಗೂ ಸದರಿಯವರನ್ನು ಬಡ್ತಿಗೆ ಪರಿಗಣಿಸುವ ದಿನಾಂಕದಿಂದ ನಾಲ್ಕು ವರ್ಷಗಳವರೆಗೆ ಅವರ ಬಡ್ತಿಯನ್ನು ತಡೆಯಿಡಿಯುವ ದಂಡನೆಯನ್ನು** ಮತ್ತು ಶ್ರೀ ಸುಭಾಷ್ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ) ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214(1)(ಬಿ)ರಡಿ **"ಸದರಿಯವರಿಗೆ ಪ್ರಾಪ್ತವಾಗುವ ಪಿಂಚಣಿಯಲ್ಲಿ ರೂ.1,30,000/-ಗಳನ್ನು ವಸೂಲು ಮಾಡುವ** ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 10/02/2020.
(ಬಿ.ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತ-2, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
7. ಶ್ರೀ ಚನ್ನಯ್ಯ ಎಂ., ಕಾರ್ಯದರ್ಶಿ, ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
8. ಶ್ರೀ ಸುಭಾಷ್ ಮೇಟಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ) ಗಾದಿಗನೂರು ಗ್ರಾಮ ಪಂಚಾಯಿತಿ, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ.
9. ಗಣಕ ಕೋಶ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

******